ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ ಖಾದಿ ಕೇಂದ್ರಗಳ ಸಿಬ್ಬಂದಿ ವರ್ಗದವರಂ ಸ್ವಾತಂತ್ರ್ಯದಿನದಂದು ಬೆಳಗಾವಿಯಲ್ಲಿ ಮೆರವಣಿಗೆ ನಡೆಸಿದ್ದು ತಮ್ಮ ಸಂಬಳ ಮತ್ತು ಇತರೆ ಸೌಲಭ್ಯಗಳನ್ನು ಪರಿಷ್ಕರಿಸಬೇಕೆಂದು ಒತ್ತಾಯ ಮಾಡಲು ಈ ಬಗ್ಗೆ ಅವರುಗಳು ತಮ್ಮ ಬೇಡಿಕೆಗಳನ್ನು ಮಂಡಲಿಗೂ ಹಾಗೂ ಸರ್ಕಾರಕ್ಕೆ ನೀಡಿದ್ದಾರೆ. ಆದರೆ, ಇದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಖಾದಿ ಗ್ರಾಮೋದ್ಯೋಗ ಮಂಡಲಿಗಾಗಲೀ ಅಥವಾ ಸರ್ಕಾರಕ್ಕಾಗಲೀ ಅಡಚಣೆ ಇರುತ್ತದೆ, ಮುಂಬೈನಲ್ಲಿರುವ ಅಖಿಲ ಭಾರತ ಖಾದಿ ಗ್ರಾಮೋದ್ಯೋಗ ಆಯೋಗವೇ ಖಾದಿ ಬಟ್ಟೆ ಉತ್ಪಾದನೆಗೆ ನಿಗಧಿತ ಬೆಲೆ ಪಟ್ಟಿಯನ್ನು (COST CHART) ನಿಗದಿಪಡಿಸುತ್ತದೆ. ಆ ಬೆಲೆ ಪಟ್ಟಿಯ ಪ್ರಕಾರವೇ ನೂಲು ಗಾರರಿಗೆ ನೇಕಾರರಿಗೆ ಮತ್ತಿತರ ನೌಕರರಿಗೆ ಸಂಬಳವಾಗಲೀ ಅಥವಾ ಕೂಲಿಯನ್ನಾಗಲೀ ನೀಡಬೇಕಾಗುತ್ತದೆ. ಆ ಬೆಲೆ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರ ಖಾದಿ ಗ್ರಾಮೋದ್ಯೋಗ ಆಯೋಗಕ್ಕೆ ಮಾತ್ರ ಇದೆ. ಖಾದಿ ಸಂಘ ಸಂಸ್ಥೆಗಳ ನೌಕರರ ವೇತನ ಮತ್ತು ಇತರೇ ಸೌಲಭ್ಯಗಳ ಪರಿಷ್ಕರಣೆಗೆ ಖಾದಿ ಗ್ರಾಮೋದ್ಯೋಗ ಆಯೋಗವು ಒಂದು ಸಮಿತಿಯನ್ನು ನೇಮಕ ಮಾಡಿದೆ. ಆ ಸಮಿತಿ ತನ್ನ ವರದಿಯನ್ನು ನೀಡಿದ ನಂತರ ಆಯೋಗವು ಮುಂದಿನ ಕ್ರಮವನ್ನು ಕೈಗೊಳ್ಳಬಹುದು.

ಅಲ್ಲದೇ, ಬೆಳಗಾಂ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘ, ಬೆಳಗಾಂ ಇದಕ್ಕೆ ಖಾದಿ ಗ್ರಾಮೋದ್ಯೋಗ ಆಯೋಗ ಮುಂಬೈ ಇವರೇ ನೇರವಾಗಿ ಧನ ಸಹಾಯ ಮಾಡುತ್ತಿದ್ದು ಈ ಸಂಘವು ಮಂಡಲಿಯ ಆಡಳಿತ ಕಕ್ಷೆಯಲ್ಲಿ ಬರುವುದಿಲ್ಲ. ಸಂಬಳ ಮತ್ತು ಇತರೇ ಸೌಲಭ್ಯಗಳನ್ನು ಹೆಚ್ಚಿಸ ಬೇಕೆಂಬ ಉದ್ದೇಶದಿಂದ ನೌಕರರು ಕರಾಳ ದಿನವನ್ನು ಆಚರಿಸಿದ್ದರೇ ಈ ವಿಷಯವನ್ನು ಸಂಬಂಧಪಟ್ಟ ಸಂಘಸಂಸ್ಥೆಗಳ ಆಡಳಿತ ವರ್ಗವೇ ತೀರ್ಮಾನಿಸಬೇಕಾಗುತ್ತದೆ.

ಆದರೂ ಸ್ವಾತಂತ್ರ್ಯದ ದಿನದಂದು ಕರಾಳ ದಿನವನ್ನು ಆಚರಿಸಲು ಕಾರಣ ಕರ್ತರಾದವರಿಗೆ ಯೋಗ್ಯ ಎಚ್ಚರಿಕೆಯನ್ನು ನೀಡುವಂತೆ ಸಂಬಂಧಪಟ್ಟ ಸಂಘ ಸಂಸ್ಥೆಗಳ ಆಡಳಿತ ವರ್ಗದವರಿಗೆ ಮಂಡಲಿಯ ಪರವಾಗಿ ಕೇಳಿಕೊಳ್ಳಲಾಗುತ್ತದೆ. ರಾಜ್ಯ ಖಾದಿ ಮಂಡಲಿಯು, ರಾಜ್ಯ ಸರ್ಕಾರವು ಖಾದಿ ವಸ್ತ್ರಾಚರಣೆಯ ಮೇಲೆ ನೀಡುವಂತಹ ರಿಬೇಟನ್ನು ಸರ್ಕಾರವು ಅಪೇಕ್ಷಿಸಿದಲ್ಲಿ ಮೇಲ್ಕಂಡ ಸಂಘಕ್ಕೆ ತಡೆಹಿಡಿಯಲು ಕ್ರಮ ಕೈಗೊಳ್ಳುತ್ತದೆ.

೨೦. ಮೈಸೂರು ಗಂಧದ ಎಣ್ಣೆ ಕಾರ್ಖಾನೆಗೆ ಸೇರಿದ ಸ್ಕ್ರಾಪ್ ವಸ್ತುಗಳನ್ನು ಮಾರಾಟ ಮಾಡುವಲ್ಲಿ ಆಗಿರುವ ಅವ್ಯವಹಾರದ ಬಗ್ಗೆ

ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ),— ಮಾನ್ಯ ಅಧ್ಯಕ್ಷರೇ ಮೈಸೂರು ಗಂಧದ ಎಣ್ಣೆ ಕಾರ್ಖಾನೆಗೆ ಸೇರಿದ ಸ್ಕ್ರಾಪ್ ವಸ್ತುಗಳನ್ನು ಮಾರಾಟ ಮಾಡುವಾಗ ಅವ್ಯವಹಾರ ನಡೆದು ಮೂರು ಲಕ್ಷ ರೂಪಾಯಿ ಬೆಲೆಯ ವಸ್ತುಗಳನ್ನು ಕೇವಲ ೮,೮೦೦ ರೂಪಾಯಿಗಳಿಗೆ ಮಾರಾಟ ಮಾಡಿದ್ದ ಅವ್ಯವಹಾರದ ಬಗ್ಗೆ ನಾನು ಕಳೆದ ಶಾಸನಸಭೆಯಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಈ ಅವ್ಯವಹಾರಕ್ಕೆ ಕಾರಣವಾಗಿದ್ದ ಆಗಿನ ಜನರಲ್ ಮ್ಯಾನೇಜರ್ ಆಗಿದ್ದ ಶಾನುಭೋಗರವರನ್ನು ಅಮಾನತ್ತಿನಲ್ಲಿ ಇಟ್ಟು ತನಿಖೆ ಮಾಡುವುದಾಗಿ ಹೇಳಿದ್ದರು. ಈಗ ತನಿಖೆ ಮಾಡಿಸದೆ ಸದರಿ ಅಧಿಕಾರಿಯನ್ನು ಅದೇ ಜಾಗದಲ್ಲಿ ಪುನಃ ನೇಮಕ ಮಾಡಿ ಮುಂದುವರಿಸಲಾಗಿದೆ. ಇದು ಆ ಅಧಿಕಾರಿ ನಡೆಸಿದ ಅವ್ಯವಹಾರಕ್ಕೆ ಸರಕಾರ ಕೊಟ್ಟ ಬಡ್ತಿಯೇ ಅಥವಾ ಪರಿಹಾರವೇ ಅಥವಾ ಪ್ರಶಸ್ತಿಯೇ ಈ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ತನಿಖೆ ಮಾಡಿಸುವುದಾಗಿ ಸರ್ಕಾರ ಈ ಸದನಕ್ಕೆ ಕೊಟ್ಟ ಆಶ್ವಾಸನೆಯನ್ನು ತಪ್ಪದೆ ಈಡೇರಿಸಿದೆಯೇ ? ಆದರೆ ಈ ಸದನಕ್ಕೆ ಕೊಟ್ಟ ಆಶ್ವಾಸನೆಯು ಅದಕ್ಕಿಂತ ಕೆಡೆಯಾಯಿತೆ. ಎಂದು ಸಂಶಯ ಪಡುವ ಪರಿಸ್ಥಿತಿ ಉಂಟಾಗಿದೆ.

ಈ ಅವ್ಯವಹಾರಕ್ಕೆ ಕಾರಣರಾದ ಶಾನುಭೋಗರನ್ನು ಅಮಾನತ್ತಿನಲ್ಲಿಟ್ಟು ಈ ಬಗ್ಗೆ ತನಿಖೆ ನಡೆಸ ನಡೆಸಬೇಕೆಂದು ಆಡಳಿತ ಮಂಡಳಿ ತೀರ್ಮಾನ ಕೈಗೊಂಡಿದ್ದಾಗ್ಯೂ ಸರಕಾರ ಅವರ ಮೇಲೆ ಕ್ರಮ ಕೈಕೊಂಡಿಲ್ಲ. ಆದ್ದರಿಂದ ಆಡಳಿತ ಮಂಡಲಿಯು ತೀರ್ಮಾನದ ಪ್ರತಿಯನ್ನು ಈ ಸದನದ ಮುಂದೆ ಇಡಬೇಕೆಂದು ಈ ಮೂಲಕ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಸಚಿವರು).—ಮಾನ್ಯ ಅಧ್ಯಕ್ಷರೇ ಮೈಸೂರು ಗಂಧದ ಎಣ್ಣೆ ಕಾರ್ಖಾನೆಯಲ್ಲಿ ಜನರಲ್ ಮ್ಯಾನೇಜರ್ ಆಗಿ ಕೆಲಸವನ್ನು ನಿರ್ವಹಿಸುತ್ತಿದ್ದ ಶ್ರೀ ಪಿ. ಕೆ ಶಾನಭಾಗ್ ಅವರನ್ನು ಕಾರ್ಖಾನೆಗಳಿಗೆ ಸೇರಿದ ಸ್ಕ್ರಾಪ್ ವಸ್ತುಗಳನ್ನು ಮಾರಾಟ ಮಾಡುವಾಗ ಅವ್ಯವಹಾರ ನಡೆದಿದೆ ಎಂಬ ಆಪಾದನೆಯ ಮೇಲೆ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸದರೀ ಅಧಿಕಾರಿಯನ್ನು ೫-೧-೧೯೮೬ ರಿಂದ ಅಮಾನತ್ತಿನಲ್ಲಿ ಇಟ್ಟರು. ನಂತರ ಓರ್ವ ನಿವೃತ್ತ ಜಿಲ್ಲಾ ನ್ಯಾಯಾಧೀಶರ ಮುಖೇನ ಒಂದು ವಿಚಾರಣೆಯನ್ನು ಕಂಪನಿಯು ಪ್ರಾರಂಭ ಮಾಡಿಸಿತ್ತು. ಈ ವಿಚಾರಣೆಯು ಇನ್ನು ಮುಂದುವರಿಯುತ್ತಿದೆ. ಏತನ್ ಮಧ್ಯೆ ಸದರೀ ಅಧಿಕಾರಿಯು ಸರ್ಕಾರಕ್ಕೆ ಒಂದು ಮೇಲ್ಮನವಿಯನ್ನು ಸಲ್ಲಿಸಿ ವಿಚಾರಣೆಯ ವಿಷಯವು ಕಾನೂನಿಗೆ ಸರಿಯಿಲ್ಲವೆಂದು ಹೇಳಿ ಸರ್ಕಾರದವರು ಸೂಕ್ತವಾದ ಆಜ್ಞೆಯನ್ನು ಹೊರಡಿಸುವಂತೆ ಕೇಳಿಕೊಂಡರು. ತದನಂತರ ವ್ಯವಸ್ಥಾಪಕ ನಿರ್ದೇಶಕರಿಂದ ಒಂದು ವರದಿಯನ್ನು ತರಿಸಿಕೊಂಡು ಈ ಮೇಲ್ಮನವಿಯನ್ನು ಪರಿಶೀಲನೆ ಮಾಡಲಾಗಿ ವ್ಯವಸ್ಥಾಪಕ ನಿರ್ದೇಶಕರು ಸದರೀ ಅಧಿಕಾರಿಯ ವಿರುದ್ಧ ಹೊರಡಿಸಿದ ಅಮಾನತ್ತಿನ ಆಜ್ಞೆಯು ಕಾನೂನು ರೀತಿಯಲ್ಲಿ ಕ್ರಮಬದ್ಧವಾಗಿಲ್ಲವೆಂದು ಸರ್ಕಾರದವರಿಗೆ ಕಂಡು ಬಂದಿದ್ದರಿಂದ ಮತ್ತು ಆ ಅಧಿಕಾರಿಯನ್ನು ಅನಿರ್ದಿಷ್ಟ ಕಾಲದವರೆಗೆ ಅಮಾನತ್ತಿನಲ್ಲಿರುವುದು ಸರಿಯಲ್ಲವೆಂದು ಹೇಳಿ ಸದರೀ ಅಧಿಕಾರಿಯನ್ನು ಮತ್ತೆ ಕೆಲಸಕ್ಕೆ ತೆಗೆದು ಕೊಳ್ಳುವ ಹಾಗೆ ಕಂಪನಿಯ ಸಂಘನಿಯಮಾವಳಿಯ ೨೧ನೇ ಅನುಚ್ಛೇದದ ಪ್ರಕಾರ ಸರ್ಕಾರಕ್ಕೆ ಇರುವ ಅಧಿಕಾರವನ್ನು ಚಲಾಯಿಸಿ ಒಂದು ನಿರ್ದೇಶನವನ್ನು ಕೊಡಲಾಯಿತು. ಈ ನಿರ್ದೇಶನದ ಮೇರೆಗೆ ೧೧-೮-೧೯೮೬ರಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಂಮಿತವು ಸದರಿ ಅಧಿಕಾರಿಯ ಅಮಾನತ್ತಿನ ಆಜ್ಞೆಯನ್ನು ರದ್ದುಮಾಡಿ ಸದರೀ ಅಧಿಕಾರಿಗೆ ಅವರ ಅಮಾನತ್ತಿನ ಮೊದಲು ಯಾವ ಸ್ಥಾನದಲ್ಲಿ ಇದ್ದರೋ ಅದೇ ಸ್ಥಾನಕ್ಕೆ ಹಾಜರಾಗಲು ಆಜ್ಞೆಯ ತಿಳುವಳಿಕೆಯನ್ನು ಕೊಟ್ಟಿರುತ್ತಾರೆ. ಈ ಆಜ್ಞೆಯ ಪ್ರಕಾರ ಸದರೀ ಅಧಿಕಾರಿಯು ೧೩-೮-೧೯೮೬ರಂದು ಮೈಸೂರು ಕೇಂದ್ರ ಸ್ಥಾನದಲ್ಲಿ ವಿಶೇಷ ಕರ್ತವ್ಯ ಅಧಿಕಾರಿಯಾಗಿ ಅಧಿಕಾರವನ್ನು ವಹಿಸಿಕೊಂಡರು.

ಸದರೀ ಅಧಿಕಾರಿಯು ಅವ್ಯವಹಾರಗಳ ಆಪಾದನೆಯ ಸಂದರ್ಭದಲ್ಲಿ ಜನರಲ್ ಮ್ಯಾನೇಜರ್ ಆಗಿದ್ದರು. ವಿಚಾರಣೆ ಪ್ರಾರಂಭಿಸಿದ ತಕ್ಷಣ ಅವರನ್ನು ವಿಶೇಷ ಕರ್ತವ್ಯ ಅಧಿಕಾರಿಯನ್ನಾಗಿ ನೇಮಿಸಲಾಗಿತ್ತು. ಅವರು ಅಮಾನತ್ತಿನಲ್ಲಿದ್ದರಿಂದ ಅಧಿಕಾರವನ್ನು ವಹಿಸಿಕೊಂಡಿರಲಿಲ್ಲ. ಈಗ ಅಮಾನತ್ತಿನ ಆಜ್ಞೆಯನ್ನು ರದ್ದುಗೊಳಿಸಿ ವಿಶೇಷ ಕರ್ತವ್ಯ ಅಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿರುತ್ತಾರೆ. ಈ ಕಾರಣದಿಂದ ಇದೇ ಹುದ್ದೆಗೆ ಅಂದರೆ ಜನರಲ್ ಮ್ಯಾನೇಜರ್ ಹುದ್ದೆಗೆ ನೇಮಕ ಮಾಡಿದ್ದಾರೆ ಎಂಬುದು ಸರಿ ಅಲ್ಲ.

(೨೧) ಕುಂದಾಪುರ ತಾಲ್ಲೂಕಿನ ಶಿರೂರು ಗ್ರಾಮದಲ್ಲಿರುವ ಅನೇಕ ಬಡವರು ಮನೆ ನಿವೇಶನಕ್ಕಾಗಿ ಅಲ್ಪ ಸ್ವಲ ಜಮೀನನ್ನು ಆಕ್ರಮಿಸಿಕೊಂಡಿರುವುದನ್ನು ಸಕ್ರಮಗೊಳಿಸುವ ಬಗ್ಗೆ

ಶ್ರೀ ಜಿ. ಎಸ್. ಆಚಾರ್ (ಬೈಂದೂರು) —ಮಾನ್ಯ ಅಧ್ಯಕ್ಷರೇ ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಶಿರೂರು ಗ್ರಾಮದಲ್ಲಿ ಅನೇಕ ಮಂದಿ ಬಡವರು ಹಾಗೂ ಭೂರಹಿತರು ಅನೇಕ ವರ್ಷಗಳಿಂದ ಮನೆ ನಿವೇಶನಕ್ಕಾಗಿ ಅಲ್ಪಸ್ವಲ್ಪ ಜಮೀನು ಆಕ್ರಮಿಸಿಕೊಂಡು ಅರ್ಜಿ ಸಲ್ಲಿಸಿದ್ದರೂ, ಅವರ ಆಕ್ರಮಣಗಳನ್ನು ಸಕ್ರಮೀಕರಣಗೊಳಿಸಲು ಬಾಕಿ ಇದೆ. ಕೆಲವು ಆಕ್ರಮಣಕಾರರನ್ನು ಕೆಲವು ತಿಂಗಳ ಹಿಂದೆ ನಿದರ್ಾಕ್ಷಿಣ್ಯವಾಗಿ ಎಬ್ಬಿಸಲಾಯಿತು. ಆದರೆ ಪುನಃ ಅದೇ ಜಾಗದಲ್ಲಿ ಆಕ್ರಮ ನಡೆಯುವ ಕಾರ್ಯಕ ಪ್ರಾರಂಭವಾಗಿದೆ. ಶಕ್ತರಿಗೂ, ಶ್ರೀಮಂತರಿಗೂ, ಪ್ರಭಾವಿಗಳಿಗೂ ಭೂಮಿ ಸಿಗುತ್ತದೆ. ಆದರೆ ಬಡವರ ಗೋಳು ಕೇಳುವವರೇ ಇಲ್ಲ ಎಂದು ಜನ ಹೇಳುತ್ತಿದ್ದಾರೆ. ಉದಾಹರಣೆಗೆ ಇತ್ತೀಚಿನ ವರ್ಷಗಳಲ್ಲಿ ಒಂದೇ ಶ್ರೀಮಂತ ಕುಟುಂಬದ ೩ ಜನ ಪ್ರಭಾವಿಗಳಿಗೆ (೧) ಎಸ್. ಸಿ. ಆರ್. ೧೪೪-೭೮, ೭೮-೭೯ ರಂತೆ ೧೯೮೩-೮೪ರಲ್ಲಿ ಶಿರೂರು ಗ್ರಾಮದ ಸರ್ವೇನಂಬ್ರ ೩೪೨-೨೩-೩೧ರಲ್ಲಿ ೦-೦೮ ಎಕ್ರೆಯನ್ನು ೨) ಹ್ಯಾಂಡ್ ಸಿ. ಆರ್. ೩೨-೮೪-೮೫ ೫೬-೧೧-೮೪ ರಂತೆ ಹೈವೇ ಪಕ್ಕದಲ್ಲಿ ಸ. ನಂ. ೩೪೨-೪ ಸಿಯಲ್ಲಿ ೦-೦೬ ಎಕ್ರೆಯನ್ನೂ ನೀಡಲಾಗಿದೆಯೆಂದೂ ತಿಳಿದು ಬಂದಿದೆ. ಯಾವುದೇ ಆಕ್ರಮಣದ ಕುರುಹಿಲ್ಲದೆ ಹೀಗೆ ಪ್ರಭಲರಿಗೆ ಜಾಗ ನೀಡಿ ಬಡವರಿಗೆ ದುರ್ಬಲರಿಗೆ ಅಲ್ಪಸಂಖ್ಯಾತರಿಗೆ